# ಮೊನಾರ್ಕ್ ಚಿಟ್ಟೆಯ ಮೋಹಕ ಲೋಕ





ಮೋಹಕ ಮೋನಾರ್ಕ್ ಚಿಟ್ಟೆ

**ಸಹಸ್ರಾರು ಚಿಟ್ಟೆಗಳು ಒಟ್ಟು ಸೇರುವ ಈ ತಾಣ 'ಮೊನಾರ್ಕ್ ಬಟರ್‌ಫ್ಲೈ ನ್ಯಾಚುರಲ್ ಪ್ರಿಸರ್ವ್'. ಇಲ್ಲಿ ಚಿಟ್ಟೆಗಳನ್ನು ಕೊಲ್ಲುವುದು ಅಪರಾಧ. ಚಿಟ್ಟೆಗಳನ್ನು ಮುಟ್ಟುವುದಕ್ಕೂ ಇಲ್ಲಿ ನಿಷೇಧ ಇದೆ.**

ಚಿತ್ರ– ಲೇಖನ: **ಸಹನಾ ಕಾಂತಬೈಲು**

ಹಕ್ಕಿಗಳಂತೆ ಅಲ್ಪಾಯುಷಿ ಚಿಟ್ಟೆಗಳೂ ಬಲು ದೂರ ವಲಸೆ ಹೋಗುತ್ತವೆ! ಇದು ನಿಜ. ಅಮೆರಿಕದ 'ನ್ಯಾಚುರಲ್ ಬ್ರಿಡ್ಜಸ್ ಸ್ಟೇಟ್ ಬೀಚ್'ನಲ್ಲಿ 65 ಎಕರೆ ಜಾಗದಷ್ಟು ವಿಸ್ತಾರವಾದ ಪಾರ್ಕ್ ಇದಕ್ಕೊಂದು ಸಾಕ್ಷಿ. ಕ್ಯಾಲಿಫೋರ್ನಿಯಾದ ಸಮುದ್ರ ದಡದಲ್ಲಿರುವ ಸಾಂತಕ್ರೂಜ್ ಪಟ್ಟಣದಲ್ಲಿ ಈ ಪಾರ್ಕ್ ಇದೆ.

ಎಲೆ ಉದುರುವ (ಫಾಲ್ ಸೀಸನ್) ಮತ್ತು ಚಳಿಗಾಲದಲ್ಲಿ ಅಂದರೆ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಲಕ್ಷೋಪಲಕ್ಷ ಚಿಟ್ಟೆಗಳು ಇಲ್ಲಿಗೆ ವಲಸೆ ಬರುತ್ತವೆ. ಈ ಚಿಟ್ಟೆಗಳಿಗೆ ಮೊನಾರ್ಕ್ ಚಿಟ್ಟೆಗಳೆಂದು ಹೆಸರು. ಚಿಟ್ಟೆಗಳು ಒಟ್ಟು ಸೇರುವ ಈ ತಾಣವನ್ನು 'ಮೊನಾರ್ಕ್ ಬಟರ್‌ಫ್ಲೈ ನ್ಯಾಚುರಲ್ ಪ್ರಿಸರ್ವ್' ಎಂದು ಕರೆಯುತ್ತಾರೆ. ಇಲ್ಲಿ ಚಿಟ್ಟೆಗಳನ್ನು ಕೊಲ್ಲುವುದು ಅಪರಾಧ. ಚಿಟ್ಟೆಗಳನ್ನು ಮುಟ್ಟುವುದಕ್ಕೂ ನಿಷೇಧ ಇದೆ.

ಫೆಸಿಫಿಕ್ ಸಾಗರದಿಂದ ಬೀಸುವ ಗಾಳಿ ನ್ಯಾಚುರಲ್ ಬ್ರಿಡ್ಜಸ್ ಪ್ರದೇಶವನ್ನು ಬೆಚ್ಚಗೆ ಇಟ್ಟಿದೆ. ಇಲ್ಲಿರುವ ಯೂಕಲಿಪ್ಟಸ್ ಮರಗಳು ಚಿಟ್ಟೆಗಳಿಗೆ ಆಹಾರ ಹಾಗೂ ಆವಾಸವನ್ನು ಒದಗಿಸುತ್ತವೆ. ಮೊನಾರ್ಕ್ ಚಿಟ್ಟೆಗಳು ಈ ಮರಗಳ ಮೇಲೆ ಎತ್ತರದಲ್ಲಿ ಗುಂಪು ಗುಂಪಾಗಿ ಜೋತು ಬಿದ್ದಿರುತ್ತವೆ. ಎಷ್ಟು ಎತ್ತರದಲ್ಲಿರುತ್ತವೆ ಎಂದರೆ ಇವುಗಳು ಬರಿಗಣ್ಣಿಗೆ ಸ್ಪಷ್ಟವಾಗಿ ಕಾಣುವುದಿಲ್ಲ. ಬೈನಾಕ್ಯುಲರ್ ಮೂಲಕ ನೋಡಬೇಕಾಗುತ್ತದೆ. ಎರಡು ಸಾವಿರ ಮೈಲಿಗೂ ಅಧಿಕ ದೂರದಿಂದ ಹಾರಿ ಬರುವ ಈ ಚಿಟ್ಟೆಗಳು ಪ್ರತಿವರ್ಷ ಇದೇ ಜಾಗಕ್ಕೆ ಬರುವುದು ವಿಶೇಷ.

ಇಲ್ಲಿ ಮೊನಾರ್ಕ್ ಚಿಟ್ಟೆಗಳು ಗುಂಪುಗುಂಪಾಗಿ ಮರಗಳ ಸುತ್ತ ವೃತ್ತಗಳಲ್ಲಿ